## ದ್ವಂದ್ವಾರ್ಥ ಹಾಸ್ಯವಲ್ಲ

ಒತ್ತಡದಿಂದ ಮುಕ್ತಿ ಪಡೆಯಲು ಲಘು ಹಾಸ್ಯದ ಟಿ.ವಿ. ಕಾರ್ಯಕ್ರಮಗಳನ್ನು ನೋಡುವುದು ಹಲವರಿಗೆ ಹವ್ಯಾಸ. ಆದರೆ ಈಚೆಗೆ ಟಿವಿಗಳಲ್ಲಿ ಬರುತ್ತಿರುವ ಹಾಸ್ಯ ದ್ವಂದ್ವಾರ್ಥದಿಂದ ತುಂಬಿರುತ್ತದೆ. ಮಕ್ಕಳ ಜೊತೆ ಕುಳಿತು ನೋಡಿ ಮನತುಂಬಿ ನಗಲಾಗದ ಮತ್ತು ಅರ್ಥಹೀನ ಹಾಸ್ಯದ ಕಾರ್ಯಕ್ರಮಗಳೇ 'ಕಾಮಿಡಿ ಶೋ'ಗಳು ಎನಿಸಿಬಿಟ್ಟಿವೆ.

ನರಸಿಂಹಮೂರ್ತಿ ಅವರ 'ವಿಶ್ವ– ವಿಶಾಲು' ದಿನದ ಆಗು–ಹೋಗುಗಳ ಬಗ್ಗೆ ಹಾಸ್ಯದಲ್ಲಿ ಹೇಳುತ್ತಿದ್ದರು. 'ಸಿಲ್ಲಿ ಲಲ್ಲಿ', 'ಪಾಪ ಪಾಂಡು' ಇಂತಹ ಧಾರಾವಾಹಿಗಳು ಮನೆ ಮಂದಿಯೆಲ್ಲಾ ಒಟ್ಟಿಗೆ ಕುಳಿತು ನೋಡುವಂತಿದ್ದವು.

'ಪಾಪ ತೀರ್ಪುಗಾರರು, ಕಷ್ಟಪಟ್ಟು ನಗುತ್ತಾ ಸಣ್ಣ ವಿಷಯಕ್ಕೆ ದೊಡ್ಡ ಹಾಸ್ಯದ ಮೆರುಗು ಕೊಟ್ಟು ನಗುವ ನಾಟಕವಾಡುವುದೇ ದೊಡ್ಡ ಹಾಸ್ಯ' ಎನ್ನುವಂತಿದೆ ಕಾಮಿಡಿ ಶೋಗಳಲ್ಲಿನ ಹಾಸ್ಯ. ಕಲಾವಿದರನ್ನು ನೋಡಿ ನಾವು ನಗುವಂತಾಗಿದೆ.

—ವೀಣಾ ಶಂಕರ್, ಬೆಂಗಳೂರು

## ರಣಜಿ ಪಂದ್ಯ: ಮಾಹಿತಿಯೇ ಇಲ್ಲ

ಕರ್ನಾಟಕ ಮತ್ತು ಮುಂಬಯಿ ನಡುವೆ ನಡೆಯುವ ರಣಜಿ ಪಂದ್ಯದ ಮಾಹಿತಿ ಕನ್ನಡ ಸುದ್ದಿ ವಾಹಿನಿಗಳಿಂದ ಪ್ರಸಾರವಾಗದೇ ಇರುವುದು ಬೇಸರ ತಂದಿದೆ. ಪ್ರತಿ ದಿನವೂ ಪಂದ್ಯದ ಮಾಹಿತಿಗಳನ್ನು ಕನ್ನಡದ ಸುದ್ದಿ ವಾಹಿನಿಗಳು ರಾತ್ರಿ ಆದರೂ ತಿಳಿಸಬೇಕಿತ್ತು. ನಿಂತರೆ, ಕುಳಿತರೆ ಚಿತ್ರರಂಗದ ನಟ, ನಟಿಯರ ಕುರಿತು, ಗುಜರಾತ್ ಬಗ್ಗೆ, ರಾಜಕಾರಣಿಗಳ ಬಗ್ಗೆ 'ನಮ್ಮಲ್ಲಿ ಮೊದಲು' ಅಂತ ಹಾಕಿ ಪ್ರಸಾರ ಮಾಡುವ ಈ ವಾಹಿನಿಗಳಿಗೆ ಕನಿಷ್ಠ ರಣಜಿ ಪಂದ್ಯದ ವಿವರವನ್ನು ತಿಳಿಸಬೇಕೆಂಬ ತಿಳಿವಳಿಕೆ ಇಲ್ಲವೆ? ಇದರಿಂದ ರಾಜ್ಯದ ಕ್ರಿಕೆಟ್ ಅಭಿಮಾನಿಗಳಿಗೆ ತುಂಬಾ ನಿರಾಶೆಯಾಗಿದೆ. ಪೈಪೋಟಿ ಎಂಬಂತೆ ಒಂದು ಪ್ರಕರಣವನ್ನು ದಿನವಿಡೀ ಹಿಂಡಿ ಹಿಂಡಿ ತಿಳಿಸುವ ವಾಹಿನಿಗಳು ಕನಿಷ್ಠ ಇತರ ವಿಷಯಗಳತ್ತ ಗಮನಹರಿಸುವಂತಾಗಲಿ. ಮುಂದಿನ ದಿನಗಳಲ್ಲಿ ವಾಹಿನಿಗಳು ಸರಿ ಹೋಗಬಹುದೇ ಎಂಬುದನ್ನು ಕಾದು ನೋಡೋಣ.

—ಎಸ್. ನರೇಂದ್ರ ನಾಯಕ್, ಗಂಗೊಳ್ಳಿ

ವಾರದ ಪತ್ರ

## ಖಳ ನಾಯಕಿಯರ ವಿಜೃಂಭಣೆ

ಎಲ್ಲಾ ಧಾರಾವಾಹಿಗಳಲ್ಲೂ ಇತ್ತೀಚೆಗೆ ನಾಯಕ ನಟ–ನಟಿಯರ ಪಾತ್ರ ನೀರಸವಾಗಿದೆ ಎಂದರೆ ತಪ್ಪಾಗಲಾರದು. ಧಾರಾವಾಹಿಗಳಲ್ಲಿ ಅವರ ಪಾತ್ರ 'ಆಟಕ್ಕುಂಟು ಲೆಕ್ಕಕ್ಕಿಲ್ಲ' ಎನ್ನುವಂತಾಗಿದೆ. ಖಳ ನಾಯಕರಿಗಿಂತ ಖಳ ನಾಯಕಿಯರ ಆರ್ಭಟವೇ ಜೋರಾಗಿದೆ. ಅದರಲ್ಲೂ 'ರಾಧಾ– ರಮಣ' ಧಾರಾವಾಹಿಯಲ್ಲಿ ತಾಯಿ ಸಿತಾರಾ ಹಾಗೂ ಮಗಳು ದೀಪಿಕಾ ಪಾತ್ರಗಳು ಉಗ್ರಗಾಮಿಗಳ ಅಟ್ಟಹಾಸವನ್ನು ಮೀರಿಸುವಂತಿದೆ. ಮನೆಯಲ್ಲಿ ಯಾರೇ ಮಾತನಾಡುತ್ತಿರಲಿ ಅಲ್ಲಿ ಇವರಿಬ್ಬರಲ್ಲಿ ಒಬ್ಬರು ಹಾಜರಿರಬೇಕು. ಮನೆಯವರು ಹಾಕಿಕೊಂಡ ಕಾರ್ಯಕ್ರಮಗಳನ್ನು ಮಟ್ಟ ಹಾಕಿಸುವುದು ಇವರ ಕೆಲಸ. ಮಗಳು ದಿಪೀಕಾ, ರಾಧಿಕಾಳನ್ನು ಕಿಡ್ನಾಪ್ ಮಾಡಿಸಿದ ಘಟನೆಗೆ ಶಿಕ್ಷೆಯೇ ಇಲ್ಲದಂತಾಯಿತು. ಧಾರಾವಾಹಿಯೇ ಇರಬಹುದು, ಪೊಲೀಸರು ಅಷ್ಟು ನಿಸ್ಸಹಾಯಕರೆ? ಕರ್ನಾಟಕದಲ್ಲಿ ಪೊಲೀಸರಿಗೆ ಎಂತಹ ಗೌರವವಿದೆ. ಅಂತಹದರಲ್ಲಿ ಧಾರಾವಾಹಿಗಳಲ್ಲಿ ಅವರ ಸ್ಥಿತಿ ನಾಯಿಪಾಡು. ಏಕೆ ಸೆಲೆಬ್ರಿಟಿಗಳಲ್ಲಿ ಸಲ್ಮಾನ್‌ಖಾನ್, ಸಂಜಯ್ ದತ್ ಅಂತಹವರಿಗೆ ಶಿಕ್ಷೆಯಾಗಲಿಲ್ಲವೆ! ಹೀಗಿರುವಾಗ ದಿಪೀಕಾ ಯಾವ ಲೆಕ್ಕ. ಅವಳಿಗೂ ಶಿಕ್ಷೆ ವಿಧಿಸಬಹುದಿತ್ತಲ್ಲವೆ?

—ಎನ್.ಎಸ್. ಚಂದ್ರಶೇಖರ್, ಬೆಂಗಳೂರು



## ನಿಗೂಢ!

ಝೀ ಕನ್ನಡ ವಾಹಿನಿಯ 'ನಿಗೂಢ ರಾತ್ರಿ' ನಿಜವಾಗಿಯೂ 'ನಿಗೂಢ'ವೇ ಆಗಿದೆ. ಬರೀ ಪ್ರಶ್ನೆಗಳೇ ಹುಟ್ಟುತ್ತಾ ಹೋಗುತ್ತಿವೆಯೇ ಹೊರತು ಒಂದಕ್ಕೂ ಉತ್ತರವಿಲ್ಲ. ಆದರೂ ದಿನವೂ ಕುತೂಹಲದಿಂದ ಕಾಯುವಂತೆ ಮಾಡುವ ಆನಂದ್ ಬಹಳ ಸ್ಮಾರ್ಟ್. ನೋಡುವುದನ್ನು ಬಿಡಲೂ ಆಗುತ್ತಿಲ್ಲ, ನೋಡಲೂ ಆಗುತ್ತಿಲ್ಲ. ಒಂದು ರೀತಿ ನುಂಗಲಾರದ ಉಗುಳಲಾರದ ಬಿಸಿ ತುಪ್ಪವೇ ಸರಿ.

—ಬಾಳ್ನಪೇಟೆ ನೀಲಕಂಠಪ್ಪ, ಹಾಸನ

## ಮನರಂಜಿಸಿದ ಬಿಗ್ ಬಾಸ್

ಕಲರ್ಸ್ ಕನ್ನಡ ವಾಹಿನಿಯಲ್ಲಿ ಪ್ರಸಾರವಾಗುತ್ತಿರುವ ಬಿಗ್ ಬಾಸ್ ಇತ್ತೀಚಿಗೆ ಹಲವು ವಿದ್ಯಮಾನಗಳಿಂದ ವೀಕ್ಷಕರನ್ನು ಮನರಂಜಿಸುವ ಬದಲು ತಲೆನೋವಾಗಿ ಪರಿಣಮಿಸಿದ್ದು ತನ್ನ ನಿಜವಾದ ಉದ್ದೇಶದಿಂದ ದೂರ ಸರಿದಿತ್ತು. ಸಾಮಾನ್ಯವಾಗಿ ಯುವಕರು ಈ ಕಾರ್ಯಕ್ರಮವನ್ನು ಹೆಚ್ಚಾಗಿ ವೀಕ್ಷಿಸುತ್ತಾರೆ. ಭಾಗವಹಿಸಿದ ಸ್ಪರ್ಧಿಗಳು ತಮ್ಮ ಕೌಶಲ್ಯವನ್ನು, ವಿದ್ವತ್ತನ್ನು ಪ್ರದರ್ಶಿಸಿ ಯುವಕರಿಗೆ ಪ್ರೇರಣೆಯಾಗಬೇಕಾಗಿತ್ತು. ಅದರ ಬದಲು ಗುಂಪುಗಾರಿಕೆಯಿಂದ ಕಾರ್ಯಕ್ರಮದ ಮುಖ್ಯ ಉದ್ದೇಶವನ್ನು ನಿರ್ಲಕ್ಷಿಸಲಾಗಿದೆ.

ಅಪರೂಪಕ್ಕೆ ಗಂಧದ ಗುಡಿ ಟಾಸ್ಕನಲ್ಲಿ ಸ್ಪರ್ಧಿಗಳು ಕೆಲವರು ಕಾಡು ಪ್ರಾಣಿಗಳಾಗಿ, ಕೆಲವರು ಆದಿವಾಸಿಗಳಾಗಿ ತಮ್ಮ ಪಾತ್ರಗಳನ್ನು ಚೆನ್ನಾಗಿ ನಿರ್ವಹಿಸಿದರು. ಕೆಲವು ಸಂಘರ್ಷಗಳನ್ನು ಹೊರತುಪಡಿಸಿದರೆ ವೀಕ್ಷಕರಿಗೆ ಒಳ್ಳೆಯ ಮನರಂಜನೆಯನ್ನು ನೀಡಿದರು. ಇಲ್ಲಿ ಬಿಗ್ ಬಾಸ್ ಸ್ಪರ್ಧಿಗಳು ತಮ್ಮಲ್ಲಿಯ ಮೃಗೀಯ ಗುಣಗಳನ್ನು ಹೇಗೆ ವ್ಯಕ್ತಪಡಿಸುತ್ತಾರೆ ಮತ್ತು ಇತರ ಜನರ ಜೊತೆ ಹೇಗೆ ಹೊಂದಿಕೊಳ್ಳುತ್ತಾರೆ ಎಂಬುದನ್ನು ಪರೀಕ್ಷೆಗೆ ಒಡ್ಡಿದಂತಿತ್ತು. ಇದರಲ್ಲಿ ಸ್ಪರ್ಧಿಗಳು ಯಶಸ್ವಿಯಾದರು. ಇದರ ಮುಂದುವರೆದ ಭಾಗವಾಗಿ ಬಿಗ್ ಬಾಸ್ ಸರ್ಕಸ್ ಟಾಸ್ಕನ್ನು ನೀಡಿದ್ದರು. ಇಲ್ಲಿ ನಿಜವಾಗಿಯೂ ಸ್ಪರ್ಧಿಗಳು ತಮ್ಮ ಕಲಾ ಪ್ರೌಢಿಮೆಯನ್ನು ಮೆರೆದರು. ತಮ್ಮಲ್ಲಿಯ ಎಲ್ಲ ಭೇದಗಳನ್ನು ಬದಿಗೊತ್ತಿ ತಮ್ಮ ಕಲೆಗಾರಿಕೆಯನ್ನು ಪ್ರದರ್ಶಿಸಿದರು. ಚಂದನ್ ನೀಡಿದ ಹಿನ್ನೆಲೆ ಸಂಗೀತವು ಟಾಸ್ಕನ್ನು ಇನ್ನಷ್ಟು ಮೆರಗುಗೊಳಿಸಿ ವೀಕ್ಷಕರಿಗೆ ನಿರೀಕ್ಷೆಗೂ ಮೀರಿದ ಮನರಂಜನೆ ನೀಡಿತು. ತಮ್ಮಲ್ಲಿ ಏನೇ ದುಃಖ ದುಮ್ಮಾನಗಳಿದ್ದರೂ ಜನರನ್ನು ರಂಜಿಸುವ ಜೋಕರ್ ಪಾತ್ರಗಳನ್ನು ತುಂಬಾ ಚೆನ್ನಾಗಿ ನಿರ್ವಹಿಸಿದರು.

—ಕೆ.ಪಿ. ರಾಮುಗುಂಡಿ, ಬೈಲಹೊಂಗಲ

## ಭರಪೂರು ಮನರಂಜನೆ

ಎಲ್ಲಾ ಧಾರಾವಾಹಿಗಳು ಮೋಹಿನಿ, ನಾಗಿಣಿ, ದೆವ್ವ ಭೂತಗಳ ಮೂಲಕ ವೀಕ್ಷಕರನ್ನು ಬೆಚ್ಚಿಬೀಳಿಸಲು ಪೈಪೋಟಿ ನಡೆಸುತ್ತಿರುವಾಗ ಕಲರ್ ಸೂಪರ್ (ಕನ್ನಡ)ನ 'ಮಂಗ್ಳೂರ್ ಹುಡುಗಿ ಹುಬ್ಬಳ್ಳಿ ಹುಡುಗ' ಮಾತ್ರ ಹಾಸ್ಯ, ವಿಡಂಬನೆ, ಮನರಂಜನೆಗಳನ್ನು ಭರಪೂರ ಉಣಿಸುತ್ತಾ ಸಾಗಿದೆ. ಹುಬ್ಬಳ್ಳಿ, ಮಂಗಳೂರು ಕಡೆಯ ಭಾಷೆಯು ಸಹಜತೆ, ಹಾಸ್ಯಚಟಾಕಿಗಳೊಂದಿಗೆ ಕೂಡಿ ಕಚಗುಳಿ ಇಡುವಂತಿದೆ. ಅನಿರುದ್ಧನ ತಂದೆಯ ಪಾತ್ರಧಾರಿಯ ಅಭಿನಯ ಕೆಲವೆಡೆ ಅತಿರೇಕವೆನಿಸಿದರೂ ಹಾಸ್ಯ ಧಾರಾವಾಹಿಯಾದ್ದರಿಂದ ಕ್ಷಮ್ಯ.

—ಮೀರಾ ಮೋಹನ್, ಬೆಂಗಳೂರು

## ಶಹಭಾಸ್ ಝೀ!

ಝೀ ಕನ್ನಡದಲ್ಲಿ ಆರಂಭವಾಗಿರುವ 'ಸರಿಗಮಪ...'ನಲ್ಲೊಂದು ಹೃದಯಸ್ಪರ್ಶಿ ಸನ್ನಿವೇಶ. ಹಳ್ಳಿಯೊಂದರ ಕೃಷಿ ಕುಟುಂಬದಿಂದ ಬಂದ ತೇಜಸ್ವಿ ಪಾಟೀಲ್ ಅದ್ಭುತ ಗಾಯನ ಹಾಗೂ ತನ್ನ ಮಾತುಗಳಿಂದ ಜಡ್ಜ್‌ಗಳಾದಿಯಾಗಿ ಎಲ್ಲರನ್ನೂ ಮಂತ್ರಮುಗ್ಧಗೊಳಿಸುತ್ತಾನೆ. ಅವನ ತಂದೆ ಮಗನ ಸಂಗೀತ ಆಕಾಂಕ್ಷೆ ಪೂರೈಸಲು ಅವನ ನೆಚ್ಚಿನ ಆಕಳ ಕರುವನ್ನು ಮಾರಿ ಕರೆದುಕೊಂಡು ಬಂದಿರುತ್ತಾರೆ. ಪಾಟೀಲನ ಅಶ್ರುಧಾರೆಗೆ ಇಡೀ ಸಭಾಭವನ ಆರ್ದ್ರವಾಗುತ್ತದೆ.

ತಕ್ಷಣ ಹಂಸಲೇಖ 'ಹಣ ಕೊಡುತ್ತೇನೆ. ಕರುವನ್ನು ವಾಪಸ್ ಕೊಂಡುಕೋ' ಎನ್ನುತ್ತಾರೆ. ಅವರಿಗೆ ಹೃದಯಪೂರ್ವಕ ನಮನಗಳು.

—ಕೆ.ಶ್ರೀನಿವಾಸರಾವ್, ಹರಪನಹಳ್ಳಿ